ಇಲಾಖೆ / ವಿಷಯ: DEPARTMENT / SUBJECT: ಗೃಹ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ    ದಿನಾಂಕ : DATE : 27/03/2019

## ಪೊಲೀಸರ ಗೌರವಧನ 6 ಸಾವಿರ ರೂ. ಹೆಚ್ಚಳ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಫ್ಲೈಯಿಂಗ್ ಸರ್ವೆಲೆನ್ಸ್ ಟೀಂ (ಎಫ್‌ಟಿಪಿ) ಮತ್ತು ಸ್ಟೇಟ್ ಸರ್ವೆಲೆನ್ಸ್ ಟೀಂ(ಎಸ್‌ಎಸ್‌ಟಿ)ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರ ಗೌರವಧನ 6 ಸಾವಿರ ರೂ.ಗೆ ಏರಿಕೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ. ಎಫ್‌ಟಿಪಿ ಮತ್ತು ಎಸ್‌ಎಸ್‌ಟಿ ತಂಡದಲ್ಲಿ 6,720 ಪೊಲೀಸ್ ಅಧಿಕಾರಿ, ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ಜತೆಗೆ ಕರ್ತವ್ಯದಲ್ಲಿರುವ ಕಂದಾಯ ಅಧಿಕಾರಿ, ಸಿಬ್ಬಂದಿಗೆ ತಲಾ 6 ಸಾವಿರ ರೂ. ಸಂಭಾವನೆ ನೀಡಲಾಗುತ್ತಿದೆ. ಇದೇ ಪ್ರಮಾಣದ ಗೌರವಧನವನ್ನು ಪೊಲೀಸರಿಗೆ ನೀಡುವಂತೆ ಗೃಹ ಇಲಾಖೆ ಸರ್ಕಾರಕ್ಕೆ ಪತ್ರ ಬರೆದಿತ್ತು. ಇದನ್ನು ಪುರಸ್ಕರಿಸಿದ ಸರ್ಕಾರ ಈ ಹಿಂದೆ ಪೊಲೀಸರಿಗೆ ಕೊಡುತ್ತಿದ್ದ 1,200 ರೂ. ಗೌರವಧನವನ್ನು 6 ಸಾವಿರ ರೂ.ಗೆ ಏರಿಕೆ ಮಾಡಿ ಸೋಮವಾರ ಆದೇಶಿಸಿದೆ. ಈ ತಂಡಗಳು 18,710 ಚುನಾವಣಾ ಅಕ್ರಮ ಪ್ರಕರಣ ದಾಖಲಿಸಿದ್ದು, 14.73 ಕೋಟಿ ರೂ. ಮೌಲ್ಯದ ನಗದು, ಸರಕು ಜಪ್ತಿ ಮಾಡಿವೆ. ಚುನಾವಣೆ ಸಲುವಾಗಿ ರಚಿಸಿರುವ ಚುನಾವಣಾ ಕೋಶ(ಎಲೆಕ್ಷನ್ ಸೆಲ್)ದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ, ಸಿಬ್ಬಂದಿಗೂ ಗೌರವಧನ ಕೊಡಬೇಕೆಂಬ ಕೂಗು ಕೇಳಿಬಂದಿದೆ.

» **ಲೋಕಸಭಾ ಚುನಾವಣೆ ಕರ್ತವ್ಯದಲ್ಲಿ ಇರುವವರಿಗೆ ಅನ್ವಯ**